**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ: ಇ-ಸ್ಪಂದನ01/2014-15 ದಿನಾಂಕ:13-06-2014

**-: ಜ್ಞಾಪನ :-**

**ವಿಷಯ: ಇ-ಸ್ಪಂದನ ವೆಬ್‌ಸೈಟ್ ತಂತ್ರಾಂಶವನ್ನು ಅನುಷ್ಠಾನಗೊಳಿಸಿ ಅಳವಡಿಸಿಕೊಳ್ಳುವ ಬಗ್ಗೆ**

**ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ರವರ ಪ.ಸಂ :ಅ.ಸ.ಪ ಸಂಖ್ಯೆ ಸಿಆಸುಇ 228 ನಾಸೇಖಾ 2014 ದಿನಾಂಕ:23-04-2014**

*******

ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಸಿಆಸುಇ 228 ನಾಸೇಖಾ2013 ಡಿಸೆಂಬರ್ 2013 ರಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿದ್ದು ಈ ಸುತ್ತೋಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಜನತಾ ದರ್ಶನದಲ್ಲಿ ಸ್ವೀಕರಿಸಲಾದ ಮನವಿ/ಅರ್ಜಿಗಳನ್ನು ಇ-ಸ್ಪಂದನ ತಂತ್ರಾಂಶದಲ್ಲಿ **(http://espandana.in)** ದಾಖಲು ಮಾಡಲಾಗುತ್ತಿದ್ದು, ತಮ್ಮ ಕಛೇರಿಯ ವ್ಯಾಪ್ತಿಗೆ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ದೂರರ್ಜಿಗಳನ್ನು ಇಲಾಖಾ ಅಪರ ಆಯುಕ್ತರು/ನಿರ್ದೇಶಕರು/ಸಹನಿರ್ದೇಶಕರು/ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಮನವಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಆಯುಕ್ತಾಲಯ ಹಾಗೂ ನಿರ್ದೇಶನಾಲಯಗಳು ತೆಗೆದುಕೊಂಡ ಕ್ರಮದ ಬಗ್ಗೆ ಅನುಸರಣಾ ವರದಿಯನ್ನು ತಪ್ಪದೇ ದಾಖಲು ಮಾಡಬೇಕೆಂದು ಸೂಚಿಸಲಾಗಿದೆ.

ಸದರಿ ತಂತ್ರಾಂಶದ Home page ನ complaint management button ಮೇಲೆ double click ಮಾಡಿ ಈಗಾಗಲೇ ತಮಗೆ ನೀಡಿರುವ login id ಹಾಗು password ಅನ್ನು ನೀಡಿ login ಆಗುವ ಮೂಲಕ ತಮ್ಮ ಕಛೇರಿ/ ಅಧೀನ ಕಛೇರಿಗೆ ಸಂಬಂಧಿಸಿದ ದೂರುಗಳಿಗೆ ಸ್ಪಂದಿಸುವುದು. ತೆಗೆದುಕೊಂಡ ಕ್ರಮದ ಬಗ್ಗೆ ಆಯುಕ್ತರಿಗೆ ವರದಿ ಮಾಡುವುದು. ಆಯುಕ್ತಾಲಯ, ನಿರ್ದೇಶನಾಲಯ ಮತ್ತು ಸರ್ವಶಿಕ್ಷ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಛೇರಿಗೆ ಪ್ರತ್ಯೇಕವಾಗಿ User ID ಮತ್ತು Password ನ್ನು ಈಗಾಗಲೇ ನೀಡಲಾಗಿದ್ದು ತಮಗೆ ಬಂದ ದೂರುಗಳು ಹಾಗೂ ಅಹವಾಲುಗಳನ್ನು ತಮ್ಮ ಹಂತದಲ್ಲಿ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ಮಾಡಲು ಸೂಚಿಸಿದೆ.

| SL.NO | USER ID | PASSWORD | DEPARTMENT |
|---|---|---|---|
| 01 | ED No | Changeme | Dept of Public Instructions |

ಸಾರ್ವಜನಿಕರು ಜನತಾ ದರ್ಶನ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಖುದ್ದಾಗಿ ತಮ್ಮ ಸೇವೆಗೆ ಸಂಬಂಧಿಸಿದ ಅಹವಾಲನ್ನು ನೀಡುತ್ತಿರುವುದರಿಂದ ಸಂಬಂಧಿಸಿದ ಅರ್ಜಿದಾರರ ಅಹವಾಲುಗಳು ನೇರವಾಗಿ ಮಾನ್ಯ ಆಯುಕ್ತರ ಹೆಸರಿಗೆ ಬರುತ್ತಿದ್ದು, ಸಂಬಂಧಿಸಿದ ಕಡತಗಳು/ಪತ್ರಗಳು/ದೂರುಗಳು ಆಯಾ ಜಿಲ್ಲೆ/ತಾಲ್ಲೂಕು/ವಿಭಾಗ/ನಿರ್ದೇಶನಾಲಯದಲ್ಲಿರುವುದರಿಂದ ನಿಗಧಿತ ಅವಧಿಯೊಳಗೆ ಕ್ರಮವಹಿಸಲು/ವಿಲೇವಾರಿ ಮಾಡಲು ಕೇಂದ್ರ ಕಛೇರಿಯಲ್ಲಿ ಸಾಧ್ಯವಾಗದೇ ಇರುವುದರಿಂದ ಪ್ರತಿದಿನ ಸಂಬಂಧಿಸಿದ ತಂತ್ರಾಂಶದ ಮೂಲಕ login ಆಗಿ ತಮ್ಮ ಬಳಿ ಕಡತವಿದ್ದಲ್ಲಿ ಶೀಘ್ರ ವಿಲೇವಾರಿಗೆ ಕ್ರಮಕೈಗೊಂಡು ಮಾನ್ಯ ಆಯುಕ್ತರು/ ಮಾನ್ಯ ಅಪರ

ಆಯುಕ್ತರು/ ಮಾನ್ಯ ನಿರ್ದೇಶಕರುಗಳ ವಿಳಾಸಕ್ಕೆ ಬಂದ ದೂರುಗಳನ್ನು ಪರಿಶೀಲಿಸಿ ಕೈಗೊಂಡ ಕ್ರಮದ ಬಗ್ಗೆ online ಮೂಲಕವೇ ವರದಿ ಮಾಡುವುದು ಹಾಗೂ ಹಿಂಬರಹ ನೀಡಿ ಕಡತ ಮುಕ್ತಾಯಗೊಳಿಸುವುದು ಈ ಎಲ್ಲಾ ಆಯ್ಕೆಗಳು ಸದರಿ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು ತಮಗೆ ಸಂಬಂಧವಿರದ ದೂರುಗಳನ್ನು Mis-sent ಮಾಡುವ ಆಯ್ಕೆಯೂ ಇರುವುದು.

ತರಬೇತಿಯ ಅವಶ್ಯಕತೆಯನ್ನು ಮನಗೊಂಡು ಇ–ಜನಸ್ಪಂದನ ತಂತ್ರಾಂಶಕ್ಕೆ ಸಂಬಂಧಿಸಿದಂತೆ **ದಿನಾಂಕ: 30–06–14 ರಂದು ಬೆಳಿಗ್ಗೆ 10.00** ಗಂಟೆಗೆ **ರಾಜ್ಯ ಯೋಜನಾ ಕಛೇರಿ, ಸರ್ವಶಿಕ್ಷಣ ಅಭಿಯಾನ, 4ನೇ ಮಹಡಿ ನೃಪತುಂಗ ರಸ್ತೆ,ಬೆಂಗಳೂರು–01** ಇಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು ತಮ್ಮ ಕಛೇರಿಯಲ್ಲಿನ ಆಪ್ತ ಶಾಖೆಯು ಸದರಿ ಕಾರ್ಯವನ್ನು ನಿರ್ವಹಿಸಬೇಕಾಗಿದ್ದು ಸದರಿ ತರಬೇತಿಗೆ ತಮ್ಮ ಆಪ್ತ ಸಹಾಯಕರನ್ನೇ ನಿಯೋಜಿಸುವುದು ಸೂಕ್ತ.

ದೂರುಗಳನ್ನು ತುರ್ತಾಗಿ ಇತ್ಯರ್ಥಪಡಿಸಲು ಹಾಗೂ ಒಂದೇ ಪೋರ್ಟಲ್ ಮೂಲಕ ಮೇಲ್ವಿಚಾರಣೆ ನಡೆಸಲು **ದಿನಾಂಕ 05–06–2014** ರ ಪರಿಶೀಲನಾ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಸದರಿ ತಂತ್ರಾಂಶದ ಮೂಲಕ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾದ ಅಗತ್ಯವಿರುವುದರಿಂದ ಇಲಾಖೆಯ ಎಲ್ಲಾ ನಿರ್ದೇಶಕರುಗಳು ತಮ್ಮ ಅಧೀನ ಕಛೇರಿಯವರೊಂದಿಗೆ ನಿರಂತರ ಸಂಪರ್ಕ ಸಾಧಿಸಿ ಇದಕ್ಕಾಗಿ ಒಬ್ಬರು ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಅವರ ಮೂಲಕ ಕಂಪ್ಯೂಟರ್ ಪ್ರೋಗ್ರಾಮರ್‌ರವರ ಸಹಾಯದಿಂದ ಸದರಿ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ **ಶ್ರೀಮತಿ ಸುಮ** S.K **ಸಾರ್ವಜನಿಕ ಸಂಪರ್ಕಾಧಿಕಾರಿಗಳು ಆಯುಕ್ತರ ಕಛೇರಿ ಇವರನ್ನು** ಸಂಪರ್ಕಿಸಲು ತಿಳಿಸಿದೆ. ಮೊಬೈಲ್/ದೂರವಾಣಿ 9611666873/08022484716 E-mail cpipro.edu.sgkar@nic.in

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಬೆಂಗಳೂರು–1**

10/6/14

**ಪ್ರತಿಯನ್ನು: ಸೂಕ್ತ ಕ್ರಮಕ್ಕಾಗಿ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಅಪರ ಆಯುಕ್ತರು, ಆಯುಕ್ತಾಲಯ, ಧಾರವಾಡ
3. ಅಪರ ಆಯುಕ್ತರು, ಆಯುಕ್ತಾಲಯ, ಗುಲ್ಬರ್ಗ
4. ರಾಜ್ಯದ ಎಲ್ಲಾ ನಿರ್ದೇಶಕರುಗಳಿಗೆ
5. ಎಲ್ಲಾ ಪ್ರಾಂಶುಪಾಲರುಗಳು(ಸಿ.ಇ.ಟಿ)
6. ರಾಜ್ಯದ ಎಲ್ಲಾ ಸಹ ನಿರ್ದೇಶಕರುಗಳಿಗೆ
7. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು (ಆಡಳಿತ) (ಅಭಿವೃದ್ಧಿ)
8. ಎಲ್ಲಾ ಪ್ರಾಂಶುಪಾಲರುಗಳು (ಡಯಟ್)
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
10. ಆಪ್ತ ಕಾರ್ಯದರ್ಶಿಗಳು, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ, ಸಾಶಿಇ, ಬೆಂಗಳೂರು
12. ಕಛೇರಿ ಪ್ರತಿ.